
ಕವಿತೆ

# ಇರುವುದಿಷ್ಟೇ ಮಾತು




ನಿನ್ನ ಪಾಡಿಗೆ ನೀನು ಹೊರಟುಹೋದ ಮೇಲೆ
ಹೆಚ್ಚೆಂದರೆ ನಾನು ಅಲ್ಲೆಲ್ಲೋ ತುಂಬಿದ ರಸ್ತೆಗಳ ನಡುವೆ ನಿಂತು
ನಾನಿಲ್ಲಿ ಒಂಟಿ ಎನ್ನುತ್ತ ಸಾಕೆನ್ನುವಷ್ಟು ಚೀರಿ ಬರಬಹುದಿತ್ತು
ಬರೆದ ಪದ್ಯಗಳನ್ನು ಒಂದೊಂದಾಗಿ ಹರಿದುಹಾಕುತ್ತ ಈ ಹಿಂದೆ
ಒಳಗಾದ ಪಾಪಕೃತ್ಯಗಳನ್ನು ನಿಧಾನವಾಗಿ
ಸಡಿಲಗೊಳಿಸಿಕೊಳ್ಳುತ್ತ ಒಂದಿಷ್ಟು ಹಗುರಾಗಬಹುದಿತ್ತು
ವಿಶಾಲವಾದ ಬದುಕನ್ನು ಹಿಂಜಿ ಹೀರಿ ನಲುಗಿಸಿ
ವಿಷಣ್ಣನಾಗಿ ಕ್ರಮೇಣ ಕಿಡಿತಾಕಿದ ಕರ್ಪೂರದಂತೆ
ಕರಗಿ ಕಡೆಗೆ ನೆಲಕ್ಕಂಟುವ ಕಪ್ಪುಮಸಿಯಾಗಬಹುದಿತ್ತು
ಹಿಂದೆಂದೋ ನಿನ್ನ ಸ್ನಿಗ್ಧ ಮೊಲೆಗಳ ಮೇಲೆ ಬೆರಳಾಡಿಸಿದ
ನನ್ನ ಮೊದಲ ರಸಿಕತನದ ಕಿಡಿಗೇಡಿ ಗಳಿಗೆಯನ್ನು
ಮರಳಿ ನೆನೆಯುತ್ತಲೇ ನನ್ನನ್ನು ಶಪಿಸಿಕೊಳ್ಳಬಹುದಿತ್ತು, ವಿಮೋಚನೆಗೊಳ್ಳಬಹುದಿತ್ತು
ಈಗ ಏನೊಂದನ್ನೂ ಮುಂದುವರೆಸಲಾಗದವನಾಗಿ ಒಳಗೇ ಬೇಯುತ್ತೇನೆ
ಕನ್ನಡಿಯ ಎದುರು ದಷ್ಟಪುಷ್ಟವಾದ ನನ್ನ ಮಾಂಸಖಂಡಗಳು
ನಿನ್ನೆದುರು ಮಾತ್ರ ಜೋತುಬಿದ್ದು ಜೋಲಾಡುತ್ತಿವೆ
ನನ್ನದೆಗೆ ಜೋಡಿಸಿಟ್ಟ ಪುರಾತನ ಕಿಟಕಿಯಲ್ಲಿ
ಕೇವಲ ಕತ್ತಲಷ್ಟೇ ಒಳಗಿಳಿಯುತ್ತಿದೆ ಬೆಳಕಿನ ಲವಲೇಶವೂ ಇಲ್ಲ
ಇರುಳ ಮಿಣುಕುಹುಳು ಬಂದರಷ್ಟೇ ಬೆಳಕಂತೆ
ಭಯವಾಗುತ್ತಿದೆ
ಮತ್ತೆ ಚೀರಬೇಕೆಂದುಕೊಳ್ಳಲು
ಗಂಟಲು ಸಡಿಲಿಸಿಕೊಂಡು ಅಡಗಿಸಿಟ್ಟುಕೊಂಡಿದ್ದ
ಅಷ್ಟೂ ದನಿಯನ್ನು ಬಳಸಿ ಗಟ್ಟಿಯಾಗಿ ಚೀರುತ್ತೇನೆ
ಬರೀ ಗಾಳಿಯಷ್ಟೇ ಹೊರಜಾರುತ್ತದೆ
ನಾನು, ಮತ್ತೆ ವಿಷಣ್ಣನಾಗುತ್ತೇನೆ, ಅಲ್ಪನಾಗುತ್ತೇನೆ
ನೀನು, ಹುಟ್ಟುಹಬ್ಬಕ್ಕೆ ಕಡತಂದು ಕೊಂಡ ಪುಟಾಣಿ
ಚಪ್ಪಲಿಮೆಟ್ಟು ಇಷ್ಟದಂತೆ ನಡೆಯಲು ಹಾದಿ ಬದಲಿಸುವಲ್ಲಿ
ಅಣಿಯಾಗಬಹುದು

● **ಸಂದೀಪ್ ಈಶಾನ್ಯ**